



# ನೀಲಾಂಬರಿ ಲಿಮೋನಿಯಂ ಪೆರಿಝಿ

ಚಿತ್ರ–ಬರಹ:
**ಹನುಮಂತ ಭಟ್ ಬಿ.**

ಈ ಹೂ ಬಿಡುವ ಸಸ್ಯಕ್ಕೆ ಸಮುದ್ರದ ಲ್ಯಾವೆಂಡರ್, ಕ್ಯಾಸ್ಪಿಯಾ, ಮಾರ್ಷ್ ರೋಸ್ ಮೆರಿ ಎಂಬಿತ್ಯಾದಿ ಹೆಸರುಗಳಿವೆ. ಇದು ಪ್ಲಂಬೇಜಿ ನೇಷಿಯೇ ಕುಟುಂಬಕ್ಕೆ ಸೇರಿದೆ. ಸುಮಾರು 120ಕ್ಕೂ ಅಧಿಕ ವೈವಿಧ್ಯಗಳಿರುವ ಲಿಮೋನಿಯಂ ಸಂಕುಲದ ಸಸ್ಯವೇ ಈ 'ಲಿಮೋನಿಯಂ ಪೆರಿಝಿ' (**Limonium Perezii**). ಲಿಮೋನಿಯಂ ಎಂಬುದು ಲ್ಯಾಟಿನ್ ಭಾಷೆಯಿಂದ ಬಂದಿದ್ದು. ಕೆನರಿ ದ್ವೀಪಗಳ ತೀರದಲ್ಲಿ ಇದರ ಇರುವಿಕೆಯನ್ನು ಕಾಣಬಹುದು.

ಬೇರು–ಕಾಂಡ ಮಾತ್ರದಿಂದಲೇ ಸದಾ ದಟ್ಟವಾಗಿ ಹಬ್ಬುವ ಮೂಲಿಕೆಯ ಪ್ರಕಾರಕ್ಕೆ ಸೇರಿದ ಸಸ್ಯವಿದು. ಇದರ ಎಲೆಗಳು 30 ಸೆಂ.ಮೀ ಅಳತೆಯಲ್ಲಿ ಅಂಡಾಕಾರ ಹಾಗೂ ವೃತ್ತಾಕಾರದಲ್ಲಿದ್ದು ದಪ್ಪನಾಗಿರುತ್ತವೆ. 15ರಿಂದ 45 ಸೆಂ.ಮೀ ಎತ್ತರವಿರುವ ಸಸ್ಯದ ಮೇಲ್ತುದಿಯಲ್ಲಿ ಲ್ಯಾವೆಂಡರ್ ಪತ್ರಗಳಲ್ಲಿ ಬಿಳಿ ಬಣ್ಣದ ದಳಗಳನ್ನು ಹೊಂದಿದ ಲಿಮೋನಿಯಂ ಪೆರಿಝಿಯ ಪುಷ್ಪ ಸಮೂಹ ಪೊದೆಗಳಂತೆ ಆವರಿಸಿರುತ್ತದೆ. ನೋಡಲು ರಮಣೀಯ.

ಪ್ರತಿ ಹೂವು ಚಿಕ್ಕದಾಗಿದ್ದು 4ರಿಂದ 10 ಮಿ.ಮೀ. ಉದ್ದವಿದೆ. 5 ದಳಗಳನ್ನು ಹಾಗೂ 5 ಕೇಸರಗಳನ್ನು ಹೊಂದಿರುತ್ತದೆ. ಇದರ ಬೀಜವು ಚಿಕ್ಕ ಕ್ಯಾಪ್ಸೂಲ್–ನಂತಿದ್ದು ಒಂದೇ ಬೀಜವನ್ನು ಹೊಂದಿರುತ್ತದೆ. ಕೈತೋಟದ ಅಲಂಕಾರಕ್ಕೆ ಇದನ್ನು ಹೆಚ್ಚಾಗಿ ಬೆಳೆಸುತ್ತಾರೆ. ಇದನ್ನು ಸಮುದ್ರ ಕಿನಾರೆಯ ಲ್ಯಾವೆಂಡರ್ ತಾರೆ ಎಂದರೆ ಉತ್ಪ್ರೇಕ್ಷೆ ಏನಲ್ಲ.